**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ**10006/2023

ಪಿಡಬ್ಲೂ– 07

ಸಿಡಬ್ಲೂ– 07

| | |
|---|---|
| ಸಾಕ್ಷಿ ಹೆಸರು | – ಪ್ರಭು ಭಟ್ಟ |
| ತಂದೆ ಹೆಸರು | – ಬಿ. ಚಿದಂಬರ ರಾವ್ |
| ವಯಸ್ಸು | – 67 ವರ್ಷ |
| ಉದ್ಯೋಗ | – ವ್ಯವಸಾಯ |
| ವಾಸಃ | – ಯಲಸಿ ಗ್ರಾಮ, ಸೊರಬ ತಾಲ್ಲೂಕು |

**ಪ್ರಮಾಣ ವಚನ ಭೋದಿಸಿದ ದಿನಾಂಕಃ 06–08–2025.**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ನನಗೆ ಚಾಸಾ1, ಚಾಸಾ2 ಮತ್ತು ಚಾಸಾ8 ರವರ ಪರಿಚಯ ಇರುತ್ತದೆ. ಆರೋಪಿತರು ಗೊತ್ತು ಅವರು ನಮ್ಮ ಗ್ರಾಮದವರು. ಪೋಲೀಸರು ಈ ಪ್ರಕರಣದಲ್ಲಿ ಸ್ಥಳ ಪಂಚನಾಮೆ ಮಾಡಿದ ಬಗ್ಗೆ ಗೊತ್ತು. ಚಾಸಾ6 ರವರು ನನಗೆ ಕರೆ ಮಾಡಿ ಚಾಸಾ2 ರವರ ಮನೆಯ ಹತ್ತಿರ ಬನ್ನಿ ಎಂದು ತಿಳಿಸಿದರು. ನಾನು ಚಾಸಾ2 ರವರ ಮನೆಗೆ ಹೋದಾಗ ಪೋಲೀಸರು ಬಂದಿದ್ದರು. ಚಾಸಾ2 ರವರ ಮನೆಯ ಹತ್ತಿರ ನನ್ನ ಎರಡು ಸಹಿ ತೆಗೆದುಕೊಂಡರು ಮತ್ತು ನನ್ನನ್ನು ಮತ್ತು ಇನ್ನೊಬ್ಬರನ್ನು ಮತ್ತು ಚಾಸಾ2 ರವರನ್ನು ನಿಲ್ಲಿಸಿ

ಫೋಟೋಗಳನ್ನು ತೆಗೆದಿರುತ್ತಾರೆ. ಈಗ ತೋರಿಸಿದ ನಿಪಿ 8 ರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ8(ಬಿ) ಎಂದು ಗುರುತಿಸಲಾಯಿತು. ನಾನು ಚಾಸಾ2 ರವರ ಮನೆಗೆ ದಿನಾಂಕಃ 07-03-2022 ರಂದು ಹೋಗಿರುತ್ತೇನೆ. ನಾನು ಅವರ ಮನೆಗೆ ಹೋದಾಗ ಬೆಳಿಗ್ಗೆ 11-45 ಗಂಟೆ ಆಗಿತ್ತು. ನಾನು ಚಾಸಾ2 ರವರ ಮನೆಗೆ ಹೋದಾಗ ಚಾಸಾ2 ರವರು ಪೋಲೀಸರ ಹತ್ತಿರ ಏನೋ ಮಾತನಾಡುತ್ತಿದ್ದರು. ನಾನು ಚಾಸಾ2 ರವರ ಮನೆಗೆ ಹೋದಾಗ ಚಾಸಾ2 ರವರಿಗೂ ಮತ್ತು ಅವರ ಪಕ್ಕದ ಮನೆಯವರಾದ ಆರೋಪಿತರ ನಡುವೆ ಗಲಾಟೆ ಆಗಿರುತ್ತದೆ ಎಂದು ಗೊತ್ತಾಯಿತು. ಗಲಾಟೆಯಾದ ಸ್ಥಳವನ್ನು ಪೋಲೀಸರಿಗೆ ಯಾರು ತೋರಿಸಿದರು ಎಂದರೆ ಸಾಕ್ಷಿ ಚಾಸಾ2 ರವರು ಪೋಲೀಸರ ಜೊತೆ ಮಾತನಾಡುತ್ತಿದ್ದರು ನನಗೆ ಅಷ್ಟು ಮಾತ್ರ ಗೊತ್ತು ಎಂದು ಹೇಳುತ್ತಾರೆ. ಸಾಕ್ಷಿ ನಾನು ದೂರದಲ್ಲಿದ್ದೆ, ಚಾಸಾ2 ಮತ್ತು ಪೋಲೀಸರು ಏನು ಮಾತನಾಡಿಕೊಳ್ಳುತ್ತಿದ್ದರು ಎಂದು ನನಗೆ ಸರಿಯಾಗಿ ಕೇಳಿಸಿಲ್ಲ. ಚಾಸಾ2 ರವರು ಪೋಲೀಸರಿಗೆ ಒಂದು ಕತ್ತಿಯನ್ನು ಕೊಟ್ಟರು, ಆಗ ಪೋಲೀಸರು ನಮ್ಮನ್ನು ನಿಲ್ಲಿಸಿ ಫೋಟೋ ತೆಗೆದಿರುತ್ತಾರೆ. ಈಗ ತೋರಿಸಿದ ಮು ಮಾ 4 ಚಾಸಾ2 ರವರು ಆ ದಿವಸ ಪೋಲೀಸರಿಗೆ ನೀಡಿದ ಕತ್ತಿ ಇರಬಹುದು. ಮು ಮಾ 4 ರ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ.

ಈಗ ತೋರಿಸಿದ ನಿಪಿ 6 ಮತ್ತು ನಿಪಿ 7 ಸ್ಥಳದಲ್ಲಿ ತೆಗೆದ ಫೋಟೋ ಆಗಿರುತ್ತವೆ. ನಿಪಿ 7 ಫೊಟೋದಲ್ಲಿ ಪೋಲೀಸರಿಗೆ ಕತ್ತಿ ಕೊಡುತ್ತಿರುವ ವ್ಯಕ್ತಿ ಚಾಸಾ2 ರವರು ಆಗಿರುತ್ತಾರೆ. ಈಗ ತೋರಿಸಿದ ನಿಪಿ 5 ರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ5(ಬಿ) ಎಂದು ಗುರುತಿಸಲಾಯಿತು. ನಿಪಿ 5 ಕ್ಕೆ ಚಾಸಾ8 ರವರು ಸಹ ಸಹಿ ಹಾಕಿರುತ್ತಾರೆ.

**(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)**

**ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ನಾನು ಚಾಸಾ2 ರವರ ಮನೆಯ ಹತ್ತಿರ ಹೋದಾಗ ಪೋಲೀಸರು ಸ್ಥಳ ಪಂಚನಾಮೆ ಮಾಡುವ ಸಲುವಾಗಿ ನಿಪಿ8 ರಂತೆ ನನಗೆ ನೋಟೀಸ್ ಜಾರಿ ಮಾಡಿರುತ್ತಾರೆ ಎಂದರೆ ಸರಿ. ಚಾಸಾ2 ರವರು ಅವರ ಮನೆ ಮತ್ತು ಆರೋಪಿತರ ಮನೆ ನಡುವೆ ಇರುವ ಖಾಲಿ ಜಾಗವನ್ನು ತೋರಿಸಿ ಇದೇ ಸ್ಥಳದಲ್ಲಿ ಘಟನೆ ನಡೆಯಿತು ಎಂದು ಹೇಳಿದ ಮೇರೆಗೆ ಪೋಲೀಸರು ನನ್ನ ಸಮಕ್ಷಮ ನಿಪಿ 5 ರಂತೆ ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿ. ಚಾಸಾ2 ರವರು ಮು ಮಾ 4 ಕತ್ತಿಯನ್ನು ಪೋಲೀಸರಿಗೆ ನೀಡಿ ಇದೇ ಕತ್ತಿಯಿಂದ

ಆರೋಪಿತರು ತನಗೆ ಮತ್ತು ತನ್ನ ಮಗನಿಗೆ ಹಲ್ಲೆ ಮಾಡಿರುತ್ತಾರೆ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿ ನಾನು ದೂರ ಇದ್ದೆ, ನನಗೆ ಅದು ಕೇಳಿಸಿರುವುದಿಲ್ಲ ಎಂದು ಹೇಳುತ್ತಾರೆ. ನಿಪಿ 6 ಮತ್ತು 7 ಫೋಟೋದಲ್ಲಿ ನಾನು ಚಾಸಾ2 ರವರ ಪಕ್ಕದಲ್ಲಿ ಇರುತ್ತೇನೆ ಎಂದರೆ ಸರಿ. ಸಾಕ್ಷಿ ಸ್ವತಃ ಹೇಳುವುದೇನೆಂದರೆ ಫೋಟೋ ತೆಗೆಯುವಾಗ ಹತ್ತಿರ ಇರುತ್ತೇನೆ, ಆದರೆ ಚಾಸಾ2 ರವರು ಪೋಲೀಸರಿಗೆ ವಿಚಾರ ಹೇಳುವಾಗ ನಾನು ದೂರದಲ್ಲಿ ನಿಂತಿದ್ದೆ ಎಂದು ಹೇಳುತ್ತಾರೆ.

ಮು ಮಾ 4 ಕತ್ತಿಯನ್ನೇ ಚಾಸಾ2 ರವರು ಪೋಲೀಸರ ಮುಂದೆ ಹಾಜರುಪಡಿಸಿ ಅದೇ ಕತ್ತಿಯಿಂದ ಆರೋಪಿತರು ತನ್ನ ಮೇಲೆ ಮತ್ತು ತನ್ನ ಮಗನ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ಹೇಳಿ ನನ್ನ ಸಮಕ್ಷಮ ಹಾಜರುಪಡಿಸಿದ್ದರೂ ಸಹ ಆರೋಪಿತರು ನಮ್ಮ ಗ್ರಾಮದವರಾದ ಕಾರಣ ಅವರಿಗೆ ಸಹಾಯ ಮಾಡಲೆಂದು ಭಾಗಶಃ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಈ ಎನ್ ವಕೀಲರಿಂದಃ</u>**

ಚಾಸಾ3 ರವರು ನಮ್ಮ ಮನೆಗೆ ವ್ಯವಸಾಯದ ಕೆಲಸ ಮಾಡಲು ಬರುತ್ತಿದ್ದರು ಎಂದರೆ ಸಾಕ್ಷಿ ಮೊದಲು ಬರುತ್ತಿದ್ದರು ಎಂದು ಹೇಳುತ್ತಾರೆ. ಸ್ಥಳಕ್ಕೆ ಬರಲು ಚಾಸಾ 6 ರವರು ನನಗೆ ಹೇಳಿರುತ್ತಾರೆ, ಪೋಲೀಸರು ನನಗೆ ಹೇಳಿರುವುದಿಲ್ಲ ಎಂದರೆ ಸರಿ. ನಿಪಿ 5

ದಾಖಲೆಯ ವಿಚಾರಗಳನ್ನು ನಾನು ಹೇಳಿ ಬರೆಸಿರುವುದಿಲ್ಲ ಮತ್ತು ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ನಿಪಿ 5 ಮತ್ತು 8 ದಾಖಲೆಗಳಿಗೆ ಒಟ್ಟಿಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನನಗೆ ಸ್ಥಳದಲ್ಲಿ ಪೋಲೀಸರು ಫೋಟೋ ತೆಗೆದಿದ್ದು ಮತ್ತು ನನ್ನ ಸಹಿಗಳನ್ನು ತೆಗೆದುಕೊಂಡಿರುವುದು ಬಿಟ್ಟರೆ ಬೇರೆ ಯಾವುದೇ ವಿಚಾರ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).